ತೀರ್ಪು

# ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳವರ ನ್ಯಾಯಾಲಯ, ಲಕ್ಷ್ಮೇಶ್ವರ

ಉಪಸ್ಥಿತರುಃ ಶ್ರೀ ಸತೀಶ ಎಂ.
ಬಿಎ.ಎಲ್. ಎಲ್.ಎಲ್.ಬಿ.,
ದಿವಾಣಿ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ,
ಲಕ್ಷ್ಮೇಶ್ವರ

ಅಪರಾಧ ಪ್ರಕರಣ ಸಂಖ್ಯೆಃ **1140/2023**

ದಿನಾಂಕ**: 03** ನೇ ಜೂನ್ **2026**

ಫಿರ್ಯಾದುದಾರರುಃ

ಸರ್ಕಾರದ ಪರವಾಗಿ ಲಕ್ಷ್ಮೇಶ್ವರ ಪೋಲಿಸ್
(ಸಹಾಯಕ ಸರ್ಕಾರಿ ಅಭಿಯೋಜಕರು)

-ವಿರುದ್ಧ-

ಆರೋಪಿತ:

ಸುರೇಶ ತಂದೆ ಬಲವಂತಪ್ಪ ದನದಮನಿ,
ವಯಾ: 40 ವರ್ಷ, ಸಾಃ ಗೊಜನೂರ,
ತಾಃ ಶಿರಹಟ್ಟಿ ಜಿಃ ಗದಗ.
(ಶ್ರೀ ವಿ.ಆರ್.ಪಿ. ವಕೀಲರು)

| | | |
|---|---|---|
| ಘಟನೆ ಸಂಭವಿಸಿದ ದಿನಾಂಕ | : | 18.07.2017 |
| ವರದಿಯಾದ ದಿನಾಂಕ | : | 18.07.2017 |
| ಫಿರ್ಯಾದಿದಾರರ ಹೆಸರು | : | ಶ್ರೀ ಬಿ.ಬಿ. ಬಿಸನಕೊಪ್ಪ |
| ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | : | 29.07.2024 |
| ಸಾಕ್ಷಿ ವಿಚಾರಣೆ ಮುಗಿಸಿದ ದಿನಾಂಕ | : | 18.10.2025 |
| ಆರೋಪಗಳು | : | ಭಾರತೀಯ ದಂಡ ಸಂಹಿತೆ ಕಲಂ.379 ಮತ್ತು ಮೋಟಾರ ವಾಹನ ಕಾಯ್ದೆ ಕಲಂ.3 ಸಹಕಲಂ.181 ಮತ್ತು ಕಲಂ.192 ರಡಿಯಲ್ಲಿ |
| ನ್ಯಾಯಾಧೀಶರ ತೀರ್ಮಾನ | : | ಭಾರತೀಯ ದಂಡ ಸಂಹಿತೆ ಕಲಂ.379 ರಡಿಯಲ್ಲಿ ನಿರ್ದೋಷಿಯೆಂದು ಪರಿಗಣಿಸಿದೆ ಮತ್ತು ಮೋಟಾರ ವಾಹನ ಕಾಯ್ದೆ ಕಲಂ.3 ಸಹಕಲಂ.181 ಮತ್ತು ಕಲಂ.192 ರಡಿಯಲ್ಲಿ ದೋಷಿಯೆಂದು ಪರಿಗಣಿಸಿದೆ. |

ತೀರ್ಮಾನವಾದ ದಿನಾಂಕ : 03-06-2026

SATISHA M. Digitally signed by SATISHA M. Date: 2026.06.04 15:35:51 +0530

ದಿ.ನ್ಯಾ ಮತ್ತು ಪ್ರ. ದ. ನ್ಯಾ ದಂ. ನ್ಯಾ.ಲಕ್ಷ್ಮೇಶ್ವರ

## ತೀರ್ಪು

ಪ್ರಸ್ತುತ ಪ್ರಕರಣವನ್ನು ಲಕ್ಷ್ಮೇಶ್ವರ ಪೋಲಿಸ್ ಇವರು ಆರೋಪಿತನ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.379 ಮತ್ತು ಮೋಟಾರ ವಾಹನ ಕಾಯ್ದೆ ಕಲಂ.3 ಸಹಕಲಂ.181 ಮತ್ತು ಕಲಂ.192 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾನೆ ಎಂದು ಆರೋಪಿಸಿ ಆರೋಪಿತನ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2.** ಅಭಿಯೋಜನೆ ಪಕ್ಷದವರ ಪ್ರಕರಣದ ಸಂಕ್ಷಿಪ್ತ ಸಾರಾಂಶ **:-**

ದಿನಾಂಕ 18-07-2017 ರಂದು ಸಾಯಂಕಾಲ 4-45 ಗಂಟೆಗೆ ಲಕ್ಷ್ಮೇಶ್ವರ ಪೋಲಿಸ್ ಠಾಣೆ ಹದ್ದಿಯ ಪೈಕಿ ಅಕ್ಕಿಗುಂದ ಸಮೀಪದಲ್ಲಿ ಇರುವ ಹಳ್ಳದಲ್ಲಿ ಆರೋಪಿಯು ತನ್ನ ಮಾಲೀಕತ್ವದ ಸ್ವರಾಜ ಕಂಪನಿಯ ನೋಂದಣಿ ಸಂಖ್ಯೆ ಬರೆಯಿಸದೆ ಇದ್ದ ಟ್ರ್ಯಾಕ್ಟರ್ ಇಂಜಿನ ನಂ.391357/ಎಸ್ ಯುಪಿ13526, ಚೆಸ್ಸಿ ನಂ.ಡಬ್ಲ್ಯೂವಾಯಟಿಎ28432119018 ನೇ ಟ್ರ್ಯಾಕ್ಟರಕ್ಕೆ ಜೋಡನೆ ಮಾಡಿದ ನೋಂದಣಿ ಮಾಡಿಸದೇ ಇದ್ದ ಟ್ರೈಲರ ಚಸ್ಸಿ ನಂ.39 ಇಯರ 2016 ನ್ನು ತಾನು ಚಾಲನಾ ಪರವಾಣಿಗೆ ಪತ್ರವನ್ನು ಹೊಂದದೇ ಇದ್ದರೂ ಸಹ ಸರ್ಕಾರದಿಂದ ಅಥವಾ ಸಂಬಂಧಪಟ್ಟ ಇಲಾಖೆಯಿಂದ ಯಾವುದೇ ಅನುಮತಿ ಪಡೆಯದೆ ಅ.ಕಿ. ರೂ.1500/- ಕಿಮ್ಮತ್ತಿನ 2 ಘನ ಮೀಟರನಷ್ಟು ಮರಳನ್ನು ಕಳ್ಳತನದಿಂದ ಹೇರಿಕೊಂಡು ಲಕ್ಷ್ಮೇಶ್ವರ-ಗೊಜನೂರ ರಸ್ತೆ ಮೇಲೆ ಪಾರ್ವತಿ ಪೆಟ್ರೋಲ್ ಬಂಕ ಹತ್ತಿರ ಬರುತ್ತಿರುವಾಗ ಸಿಕ್ಕಿಬಿದ್ದು ಆ ಮೂಲಕ ಭಾ.ದಂ.ಸಂ. ಕಲಂ.379 ರಡಿಯಲ್ಲಿ ಹಾಗೂ ಮೋಟರ್ ವಾಹನ ಕಾಯ್ದೆ ಕಲಂ.3 ಸಹಕಲಂ.181 ಮತ್ತು ಕಲಂ.192 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾನೆಂದು ಆಪಾಧಿಸಿರುತ್ತಾರೆ.

3. ದೋಷಾರೋಪಣ ಪಟ್ಟಿ ಸಲ್ಲಿಸಿದ ನಂತರ ಈ ನ್ಯಾಯಾಲಯವು ಪ್ರಕರಣವನ್ನು ಸಂಜ್ಞೆಗೆ ತೆಗೆದುಕೊಂಡು ಆರೋಪಿತನಿಗೆ ಸಮನ್ಸ್ ನೀಡಲಾಗಿ ಆರೋಪಿತನು ತನ್ನ ವಕೀಲರ ಮೂಲಕ ಹಾಜಾರಾಗಿ ಜಾಮೀನು ಪಡೆದಿರುತ್ತಾರೆ. ಆ ನಂತರ ದೋಷಾರೋಪಣ ಪಟ್ಟಿ ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಅಡಿಯಲ್ಲಿ ಆರೋಪಿತನ ವಿರುದ್ಧ ಆಪಾದನೆಯನ್ನು ರಚಿಸಿ ಆರೋಪಿತನಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ ವಿವರಿಸಲಾಗಿ ಆರೋಪಿತನು ಯಾವುದೇ ತಪ್ಪು ಮಾಡಿಲ್ಲ ವಿಚಾರಣೆಯಾಗಬೇಕು ಎಂದು ಕೇಳಿಕೊಂಡ ಮೇರೆಗೆ ಅಭಿಯೋಜನೆ ಪಕ್ಷದ ಪರವಾಗಿ ಸಾಕ್ಷಿಗಳ ವಿಚಾರಣೆ ಮಾಡಲಾಗಿರುತ್ತದೆ.

4. ಅಭಿಯೋಜನೆ ಪರವಾಗಿ ಆರೋಪಿತನ ವಿರುದ್ಧ ಹೊರಿಸಿರುವ ಆರೋಪಣೆಯನ್ನು ರುಜುವಾತು ಪಡಿಸಲು 5 ಜನ ಸಾಕ್ಷಿದಾರರನ್ನು ಫ್ರಾ.ಸಾ.-1 ರಿಂದ ಫ್ರಾ.ಸಾ.-5 ಎಂದು ಹಾಗೂ 3 ದಾಖಲೆಗಳನ್ನು ನಿ.ಪಿ.-1 ರಿಂದ ನಿ.ಪಿ.-3 ಎಂದು ಗುರುತಿಸಿಕೊಂಡಿರುತ್ತಾರೆ. ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿತನ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಯಿತು. ಆರೋಪಿತನು ತನ್ನ ಪರವಾಗಿ ಯಾವುದೇ ಸಾಕ್ಷಿಗಳನ್ನು ವಿಚಾರಣೆ ಮಾಡಿರುವುದಿಲ್ಲ.

**5.** ಉಭಯ ಪಕ್ಷಗಳ ಪರ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರ ಹಾಗೂ ಆರೋಪಿತನ ಪರ ಮಾನ್ಯ ವಕೀಲರ ವಾದ ವಿವಾದಗಳನ್ನು ಕೇಳಲಾಯಿತು ಹಾಗೂ ಪ್ರಕರಣದ ಕಡತಗಳನ್ನು ಪರಿಶೀಲಿಸಲಾಯಿತು.

**6.** ಈ ಪಕ್ರರಣದಲ್ಲಿ ನ್ಯಾಯಾಲಯದ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸುತ್ತವೆಃ

**::ಅಂಶಗಳು::**

1. ದಿನಾಂಕ 18-07-2017 ರಂದು ಸಾಯಂಕಾಲ 4-45 ಗಂಟೆಗೆ ಲಕ್ಷ್ಮೇಶ್ವರ ಪೊಲೀಸ್ ಠಾಣೆ ಹದ್ದಿಯ ಪೈಕಿ ಅಕ್ಕಿಗುಂದ ಸಮೀಪದಲ್ಲಿ

ಇರುವ ಹಳ್ಳದಲ್ಲಿ ಆರೋಪಿತನಾದ ನೀನು ನಿನ್ನ ಸ್ವರಾಜ ಕಂಪನಿಯ ಟ್ರ್ಯಾಕ್ಟರ್ ಇಂಜಿನ ನಂ.391357/ಎಸ್ ಯುಪಿ13526, ಚೆಸ್ಸಿ ನಂ.ಡಬ್ಲ್ಯೂವಾಯಟಿಎ28432119018 ನೇ ಟ್ರ್ಯಾಕ್ಟರಕ್ಕೆ ಜೋಡನೆ ಮಾಡಿದ ಟ್ರೈಲರ ಚಸ್ಸಿ ನಂ. 39 ಇಯರ 2016 ರಲ್ಲಿ ತನ್ನ ಸ್ವಂತ ಪಾಯೀದೆಗೋಸ್ಕರ ಸರಕಾರದ ಸ್ವತ್ತಾದ ಸುಮಾರು ರೂ.1500/- ಕಿಮ್ಮತ್ತಿನ 2 ಘನ ಮೀಟರ್ ಮರಳನ್ನು ಅನಧೀಕೃತವಾಗಿ ಯಾವುದೇ ಪಾಸ್ ವ ಪರ್ಮಿಟ್ ಇಲ್ಲದೇ ಕಳ್ಳತನದಿಂದಾ ಟ್ರೇಲರದಲ್ಲಿ ತುಂಬಿಕೊಂಡು ಲಕ್ಷ್ಮೇಶ್ವರ-ಗೊಜನೂರ ರಸ್ತೆ ಮೇಲೆ ಪಾರ್ವತಿ ಪೆಟ್ರೋಲ್ ಬಂಕ ಹತ್ತಿರ ಬರುತ್ತಿರುವಾಗ ಸಿಕ್ಕು ಬಿದ್ದು ಆ ಮೂಲಕ ಭಾ.ದಂ.ಸಂ. ಕಲಂ 379 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆ ಪಕ್ಷದವರು ನಿಸ್ಸಂಶಯವಾಗಿ ಸಾಬೀತು ಪಡಿಸಿದ್ದಾರೆಯೇ?

2. ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನಾದ ನೀನು ಚಾಲನಾ ಪರವಾಣಿಗೆ ಪತ್ರವನ್ನು ಹೊಂದದೇ ಇದ್ದರೂ ಸಹ ನಿನ್ನ ಸ್ವರಾಜ ಕಂಪನಿಯ ಇಂಜಿನ ನಂ.391357/ಎಸ್ ಯುಪಿ13526, ಚೆಸ್ಸಿ ನಂ.ಡಬ್ಲ್ಯೂವಾಯಟಿಎ28432119018 ನೇ ಟ್ರ್ಯಾಕ್ಟರಕ್ಕೆ ಜೋಡನೆ ಮಾಡಿದ ಟ್ರೈಲರ ಚಸ್ಸಿ ನಂ. 39 ಇಯರ 2016 ನ್ನು ಸಾರ್ವಜನಿಕ ರಸ್ತೆಯ ಮೇಲೆ ಚಲಾವಣೆ ಮಾಡಿ ಆ ಮೂಲಕ ಮೋಟರ್ ವಾಹನಕಾಯ್ದೆ ಕಲಂ.3 ಸಹ ಕಲಂ.181 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆ ಪಕ್ಷದವರು ನಿಸ್ಸಂಶಯವಾಗಿ ಸಾಬೀತು ಪಡಿಸಿದ್ದಾರೆಯೇ?

3. ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನಾದ ನೀನು ನಿನ್ನ ಸ್ವರಾಜ ಕಂಪನಿಯ ನೊಂದಣಿ ಸಂಖ್ಯೆ ಬರೆಯಿಸದೆ ಇದ್ದ ಇಂಜಿನ ನಂ.391357/ಎಸ್ ಯುಪಿ13526, ಚೆಸ್ಸಿ ನಂ.ಡಬ್ಲ್ಯೂವಾಯಟಿಎ28432119018 ನೇ ಟ್ರ್ಯಾಕ್ಟರಕ್ಕೆ ಜೋಡನೆ ಮಾಡಿದ ನೊಂದಣಿ ಮಾಡಿಸದೇ ಇದ್ದ ಟ್ರೈಲರ ಚಸ್ಸಿ ನಂ. 39 ಇಯರ 2016 ನ್ನು ಸಾರ್ವಜನಿಕ ರಸ್ತೆಯ ಮೇಲೆ ಚಾಲನೆ ಮಾಡಿ ಆ ಮೂಲಕ ಮೋಟರ್ ವಾಹನಕಾಯ್ದೆ ಕಲಂ.192 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆ ಪಕ್ಷದವರು ನಿಸ್ಸಂಶಯವಾಗಿ ಸಾಬೀತು ಪಡಿಸಿದ್ದಾರೆಯೇ?

4. ಏನು ಆದೇಶ ಅಥವಾ ಶಿಕ್ಷೆ ?

**7.** ಅಭಿಯೋಜನೆ ಪರ ಹಾಜರು ಪಡಿಸಲಾದಂತಹ ಮೌಖಿಕ ಸಾಕ್ಷ್ಯಗಳನ್ನು, ದಾಖಲೆಗಳನ್ನು ಮತ್ತು ಉಭಯ ಪಕ್ಷಗಳ ಪರ ಮಾನ್ಯ ವಕೀಲರುಗಳ ವಾದವಿವಾದವನ್ನು ಸಂಪೂರ್ಣವಾಗಿ ಪರಿಗಣಿಸಿ ಮೇಲಿನ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಗಿದೆ.

**ಅಂಶ 1 :** ನಕರಾತ್ಮಕವಾಗಿ
**ಅಂಶ 2 :** ಸಕರಾತ್ಮಕವಾಗಿ
**ಅಂಶ 3 :** ಸಕರಾತ್ಮಕವಾಗಿ
**ಅಂಶ 4 :** ಅಂತಿಮ ಆದೇಶದನುಸಾರವಾಗಿ

## ಕಾರಣಗಳು

**8.** **ಅಂಶ 1 :** ಈ ಪ್ರಸ್ತುತ ಪ್ರಕರಣದಲ್ಲಿ ಆರೋಪಿತನು ಭಾರತೀಯ ದಂಡ ಸಂಹಿತೆ ಕಲಂ.379 ರಡಿಯಲ್ಲಿ ಹಾಗೂ ಮೋಟರ್ ವಾಹನ ಕಾಯ್ದೆ ಕಲಂ.3 ಸಹಕಲಂ.181 ಮತ್ತು ಕಲಂ.192 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾನೆಂಬುದಾಗಿರುತ್ತದೆ. ಅದನ್ನು ಯುಕ್ತಸಂಶಯಾತೀತವಾಗಿ ರುಜುವಾತುಪಡಿಸುವ ಹೊಣೆಗಾರಿಕೆಯು ಅಭಿಯೋಜನೆ ಮೇಲೆ ಇರುತ್ತದೆ.

**9.** ಕ್ರಿಮಿನಲ್ ಮೊಕದ್ದಮೆಗಳಲ್ಲಿ ರುಜುವಾತಿನ ಭಾರವು ಅಭಿಯೋಜನೆಯ ಮೇಲೆ ಇರುತ್ತದೆ, ಅಂತ ರುಜುವಾತಿನ ಭಾರವನ್ನು ಯುಕ್ತಸಂಶಯಾತೀತವಾಗಿ ರುಜುವಾತು ಪಡಿಸತಕ್ಕದ್ದು. ಆರೋಪಿತರು ಆರೋಪ ರುಜುವಾತು ಆಗುವವರೆಗೂ ಮುಗ್ದರೆಂದು ಪರಿಗಣಿಸಬೇಕೆಂಬ ಪೂರ್ವಭಾವನೆ ಇದೆ. ಆರೋಪಿತರು ತಮ್ಮ ಪರವಾಗಿ ಯಾವುದೇ ರೀತಿಯ ಪ್ರತಿರಕ್ಷಣೆಯನ್ನು ತೆಗೆದುಕೊಳ್ಳುವ ಅವಶ್ಯಕತೆ ಇರುವುದಿಲ್ಲ. ಆರೋಪಿತರ ಕೆಲಸ ಅಭಿಯೋಜನೆಯ ಸಾಕ್ಷ್ಯಗಳಲ್ಲಿ ಸಂಶಯವನ್ನು ಹುಟ್ಟು ಹಾಕುವುದಾಗಿರುತ್ತದೆ.

10. ಅಭಿಯೋಜನೆಯು ಆರೋಪಿತನ ಮೇಲೆ ಹೊರಸಿರುವ ಅಪರಾಧಕ್ಕೆ ಸಂಬಂಧಿಸಿದಂತೆ ಫ್ರಾಸಾ-1 ರಿಂದ 5 ಸಾಕ್ಷಿಗಳನ್ನು ಹಾಗೂ ನಿಪಿ-1 ರಿಂದ ನಿಪಿ-3 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

11. ಚಾಸಾ-2/ಫ್ರಾಸಾ-2 ಮತ್ತು ಚಾಸಾ-2/ಫ್ರಾಸಾ-1 ಇವರು ಜಪ್ತು ಪಂಚನಾಮೆ ಪಂಚರು ಮತ್ತು ಚಾಸಾ-4/ಫ್ರಾಸಾ-3 ಮತ್ತು ಚಾಸಾ-5/ಫ್ರಾಸಾ-4 ಇವರು ಆರೋಪಿತನು ಹೇಳಿ

ಅಕ್ರಮವಾಗಿ ಮರಳು ತುಂಬಿದ ಜಾಗೆಯ ಪಂಚನಾಮೆಯ ಪಂಚರಾಗಿದ್ದು, ಇವರು ತಮ್ಮ ಮುಖ್ಯವಿಚಾರಣೆಯಲ್ಲಿ, ಚಾಸಾ-2 ಮತ್ತು 3 ರವರು ನಿಪಿ.1/ಜಪ್ತು ಪಂಚನಾಮೆ ಮತ್ತು ಚಾಸಾ4 ಮತ್ತು 5 ರವರು ನಿಪಿ.2/ಆರೋಪಿತನು ಅಕ್ರಮವಾಗಿ ಮರಳು ತುಂಬಿದ ಜಾಗೆಯ ಪಂಚನಾಮೆಯಲ್ಲಿರುವ ತಮ್ಮ ಸಹಿಗಳನ್ನು ಗುರುತಿಸಿ, ಅವುಗಳಲ್ಲಿ ಏನು ಬರೆದಿದೆ ಎಂದು ತಮಗೆ ಗೊತ್ತಿಲ್ಲವೆಂದು, ಪೋಲಿಸರು ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿರುವುದಾಗಿ ನಿ.ಪಿ.3/ಛಾಯಾಚಿತ್ರದಲ್ಲಿ ತಮ್ಮ ಇರುವಿಕೆಯನ್ನು ಗುರುತಿಸಿ, ಅದನ್ನು ಯಾವ ಉದ್ದೇಶಕ್ಕಾಗಿ ತೆಗೆದಿದ್ದಾರೆಂದು ತಮಗೆ ಗೊತ್ತೀಲ್ಲವೆಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷಿ ನುಡಿದಿರುತ್ತಾರೆ.

**12.** ಚಾಸಾ-6/ಪ್ರಾಸಾ-5 ಇವರು ತನಿಖಾಧಿಕಾರಿಯಾಗಿದ್ದು, ಇವರು ತಮ್ಮ ಮುಖ್ಯವಿಚಾರಣೆಯಲ್ಲಿ ಫಿರ್ಯಾದಿ ನೀಡಿದ ದೂರಿನನ್ವಯ ತಾವು ಕೈಗೊಂಡ ತನಿಖೆಯ ಬಗ್ಗೆ, ಪಂಚನಾಮೆಯ ಬಗ್ಗೆ, ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡ ಬಗ್ಗೆ, ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿದ ಬಗ್ಗೆ ಮತ್ತು ದಾಖಲೆಗಳನ್ನು ಅಭಿಯೋಜನೆ ಪರ ನಿಶಾನೆಗಳಾಗಿ ಗುರುತಿಸಿದ ಬಗ್ಗೆ ಸವಿವರವಾಗಿ ವಿವರಣೆ ನೀಡಿ ಸಾಕ್ಷಿ ನುಡಿದಿರುತ್ತಾರೆ.

**13.** ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಅಭಿಯೋಜನೆಯ ಪರ ಸಾಕ್ಷಿದಾರರು ದಿನಾಂಕ 18-07-2017 ರಂದು ಸಾಯಂಕಾಲ 4-45 ಗಂಟೆಗೆ ಲಕ್ಷ್ಮೇಶ್ವರ ಪೋಲಿಸ್ ಠಾಣೆ ಹದ್ದಿಯ ಪೈಕಿ ಅಕ್ಕಿಗುಂದ ಸಮೀಪದಲ್ಲಿ ಇರುವ ಹಳ್ಳದಲ್ಲಿ ಆರೋಪಿಯು ತನ್ನ ಮಾಲೀಕತ್ವದ ಸ್ವರಾಜ ಕಂಪನಿಯ ನೋಂದಣಿ ಸಂಖ್ಯೆ ಬರೆಯಿಸದೆ ಇದ್ದ ಟ್ರ್ಯಾಕ್ಟರ್ ಇಂಜಿನ ನಂ.391357/ಎಸ್ ಯುಪಿ13526, ಚೆಸ್ಸಿ ನಂ.ಡಬ್ಲ್ಯೂವಾಯಟಿಎ 28432119018 ನೇ ಟ್ರ್ಯಾಕ್ಟರಕ್ಕೆ ಜೋಡನೆ ಮಾಡಿದ ನೋಂದಣಿ ಮಾಡಿಸದೇ ಇದ್ದ ಟ್ರೈಲರ ಚೆಸ್ಸಿ ನಂ.39 ಇಯರ 2016 ನ್ನು ತಾನು ಚಾಲನಾ ಪರವಾಣಿಗೆ ಪತ್ರವನ್ನು ಹೊಂದದೇ ಇದ್ದರೂ ಸಹ ಸರ್ಕಾರದಿಂದ

ಅಥವಾ ಸಂಬಂಧಪಟ್ಟ ಇಲಾಖೆಯಿಂದ ಯಾವುದೇ ಅನುಮತಿ ಪಡೆಯದೆ ಅ.ಕಿ. ರೂ.1500/- ಕಿಮ್ಮತ್ತಿನ 2 ಘನ ಮೀಟರನಷ್ಟು ಮರಳನ್ನು ಕಳ್ಳತನದಿಂದ ಹೇರಿಕೊಂಡು ಲಕ್ಷ್ಮೇಶ್ವರ-ಗೊಜನೂರ ರಸ್ತೆ ಮೇಲೆ ಪಾರ್ವತಿ ಪೆಟ್ರೋಲ್ ಬಂಕ ಹತ್ತಿರ ಬರುತ್ತಿರುವಾಗ ಸಿಕ್ಕಿಬಿದ್ದಿರುತ್ತಾನೆಂದು ಯುಕ್ತಸಂಶಯಾತೀತವಾಗಿ ರುಜುವಾತುಪಡಿಸಿರುತ್ತಾರೆ. ಪಂಚನಾಮೆಯ ಪಂಚರು ಚಾಸಾ 2 ರಿಂದ 5 ರವರು ಪಂಚನಾಮೆಯಲ್ಲಿರುವ ತಮ್ಮ ಸಹಿಗಳನ್ನು ಗುರುತಿಸಿರುತ್ತಾರೆ ಮತ್ತು ನಿಪಿ-3/ಛಾಯಾಚಿತ್ರದಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡಿದ್ದು ಇರುತ್ತದೆ. ಆದ್ದರಿಂದ ಆರೋಪಿತನಿಗೆ ಕಠಿಣ ಶಿಕ್ಷೆಗೆ ಗುರುಪಡಿಸುವಂತೆ ಪ್ರಾರ್ಥಿಸಿರುತ್ತಾರೆ.

**14**. ಆರೋಪಿತರ ಪರ ವಕೀಲರಾದ ಶ್ರೀ ವಿ.ಆರ್.ಪಿ. ವಕೀಲರು ತಮ್ಮ ವಾದದಲ್ಲಿ ಜಪ್ತ ಪಂಚನಾಮೆಯ ಪಂಚರು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷಿ ನುಡಿದಿರುತ್ತಾರೆ. ಪೋಲಿಸ ಸಾಕ್ಷಿಧಾರರನ್ನು/ತನಿಖಾಧಿಕಾರಿಯನ್ನು ಹೊರತುಪಡಿಸಿ ಬೇರೆ ಯಾವುದೇ ಸ್ವತಂತ್ರ್ಯ ಸಾಕ್ಷಿದಾರರನ್ನು ಸಾಕ್ಷಿಗೆ ಒಳಪಡಿಸಿರುವುದಿಲ್ಲ. ಆದ್ದರಿಂದ ಸಂಶಯದ ಲಾಭವನ್ನು ಆರೋಪಿತನಿಗೆ ನೀಡಿ ಆರೋಪಿತನನ್ನು ದೋಷಮುಕ್ತಗೊಳಿಸಬೇಕಾಗಿ ಪ್ರಾರ್ಥಿಸಿರುತ್ತಾರೆ.

**15**. ಚಾಸಾ-2 ರಿಂದ 5 ರವರು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷಿ ನುಡಿದಿರುವುದರಿಂದ ಅವರನ್ನು ಸರ್ಕಾರಿ ಸಹಾಯಕ ಅಭಿಯೋಜಕರು ಪಾಟೀ ಸವಾಲಿಗೆ ಒಳಪಡಿಸಿದರೂ ಸಹ ತಮ್ಮ ಪರವಾಗಿ ಯಾವುದೇ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ. ಚಾಸಾ-6 ರವರು ಅಧೀಕೃತ/ಪೋಲಿಸ ಸಾಕ್ಷಿಧಾರರಾಗಿದ್ದು, ಪ್ರಸ್ತುತ ಪ್ರಕರಣವು ಸಾಂದರ್ಭಿಕ ಸಾಕ್ಷಿದಾರರ ಮೇಲೆ ಅವಲಂಭಿತವಾಗಿದ್ದು, ಮಾನ್ಯ ನ್ಯಾಯಾಲಯವು ಸಾಂದರ್ಭಿಕ ಸಾಕ್ಷಿದಾರರ ಪುರಾವೆಯನ್ನು ರುಜುವಾತುಪಡಿಸಲು ಈ ಕೆಳಕಂಡ ಅಂಶಗಳನ್ನು ಪರಿಗಣಿಸಬೇಕಾಗುತ್ತದೆ.

1. ಸಾಂದರ್ಭಿಕ ಸಾಕ್ಷಿದಾರರ ಸಂಗತಿಗಳು ಪ್ರಕರಣಕ್ಕೆ ಅನುಗುಣವಾಗಿರಬೇಕು

2. ಪ್ರಕರಣದ ತೀರ್ಮಾನವನ್ನು ರುಜುವಾತುಪಡಿಸಲು ಘಟನೆಯನ್ನು ಸಂಪೂರ್ಣವಾಗಿ ರುಜುವಾತುಪಡಿಸಬೇಕು
3. ಘಟನೆಯ ಸಂದರ್ಭಗಳು ನಿರ್ಣಾಯಕ ಸ್ವರೂಪದಲ್ಲಿರಬೇಕು.
4. ಪ್ರಕರಣದ ಸಂದರ್ಭಗಳನ್ನು ಸಾಭೀತುಪಡಿಸಲು ಪ್ರಸ್ತಾಪಿಸಲಾದ ಸಿದ್ಧಾಂತವನ್ನು ಮಾತ್ರ ಅರ್ಥಯಿಸಲು ಮತ್ತು ಸಾಭೀತುಪಡಿಸಲು ಸಹಾಯ ಮಾಡುತ್ತದೆ ಮತ್ತು ಯಾವುದೇ ಇತರ ಸಿದ್ಧಾಂತವನ್ನು ಅವಲಂಭಿಸಬಾರದು.

**16.** ಪ್ರಸ್ತುತ ಪ್ರಕರಣದಲ್ಲಿ ಅಭಿಯೋಜನೆಯು ಆರೋಪಿಯು ಯಾವುದೇ ಪಾಸು ವ ಪರ್ಮಿಟ್ ಇಲ್ಲದೇ ಬಟ್ಟೂರು ಗ್ರಾಮದ ಹತ್ತಿರ ಇರುವ ಸರ್ಕಾರದ ಹಳ್ಳದಿಂದ ಅಕ್ರಮವಾಗಿ ಮರಳನ್ನು ತುಂಬಿಕೊಂಡು ಸಾಗಾಟ ಮಾಡಿರುವುದಾಗಿ ಆಪಾದನೆ ಮಾಡಿದ್ದು, ಮೊದಲನೇಯದಾಗಿ ಆರೋಪಿಯು ಅಕ್ರಮವಾಗಿ ಮರಳನ್ನು ತುಂಬಿಕೊಂಡಿರುವುದು ಸರ್ಕಾರದ ಹಳ್ಳದಿಂದಲೇ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಕೇವಲ ಛಾಯಾಚಿತ್ರದ ಮುಖಾಂತರ ಸರ್ಕಾರಿ ಹಳ್ಳ ಎಂದು ನಂಬಲು ಅಸಾಧ್ಯವಾಗುತ್ತದೆ. ಇದಲ್ಲದೇ, ಅಭಿಯೋಜನೆಯು ಆರೋಪಿಯು ಕಳುವು ಮಾಡಿದ ಮರಳನ್ನು ಸರ್ಕಾರದ ಹಳ್ಳದೇ ಎಂದು ತೋರಿಸಲು ಪಹಣಿ ಪತ್ರಿಕೆ, ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ಯಾವುದೇ ಮಾಹಿತಿಯನ್ನು ಸಂಗ್ರಹಿಸಿರುವುದಿಲ್ಲ. ಇದು ಅಭಿಯೋಜನೆಯು ಆರೋಪಿಯ ಮೇಲೆ ಮಾಡಿರುವ ಆಪಾದನೆಯ ಕುರಿತು ಸಾಭೀತುಪಡಿಸಲು ಬಹುಮುಖ್ಯ ಪಾತ್ರವಹಿಸಿದ್ದು ತನಿಖಾಧಿಕಾರಿಗಳು ಈ ಬಹುಮುಖ್ಯ ದಾಖಲೆಗಳನ್ನು ತನಿಖೆಯ ವೇಳೆಯಲ್ಲಿ ಸಂಗ್ರಹಿಸದೇ ಇರುವುದು ಅಭಿಯೋಜನೆಯ ಪ್ರಕರಣಕ್ಕೆ ಮತ್ತು ತನಿಖಾಧಿಕಾರಿಗಳ ಲೋಪವೆಂದು ಕಂಡುಬರುತ್ತದೆ. ಸದರಿ ಸಾಕ್ಷಿದಾರರ ಮುಖ್ಯವಿಚಾರಣೆ ಮತ್ತು ಪಾಟೀ ಸವಾಲನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ, ಸದರಿ ಸಾಕ್ಷಿದಾರರ ಹೇಳಿಕೆಗಳು, ಚಾಸಾ- 6 ರವರು ಅಧಿಕೃತ ಸಾಕ್ಷಿದಾರರಾಗಿದ್ದು, ಅವರು ತಾವು ಕರ್ತವ್ಯ ನಿರ್ವಹಿಸಿರುವ ಬಗ್ಗೆ ಹೇಳಿಕೆ ಮತ್ತು ಸಾಕ್ಷ

ನುಡಿದಿರುತ್ತಾರೆ. ಆದರೆ, ಕೇವಲ ಅಧಿಕೃತ ಸಾಕ್ಷಿದಾರರ ಹೇಳಿಕೆಗಳಿಂದ ಆರೋಪಿತನು ಅವನ ವಿರುದ್ಧ ಮಾಡಲಾದ ದೋಷಾರೋಪಣೆಯನ್ನು ಮಾಡಿರುವುದಾಗಿ ನಂಬುವುದು ಅಸಾಧ್ಯ. ಅದಲ್ಲದೇ ಆರೋಪಿತನ ವಿರುದ್ಧ ಮಾಡಲಾದ ಆಪಾದನೆಯನ್ನು ಅಭಿಯೋಜನೆಯು ತನ್ನ ಸಾಕ್ಷಾಧಾರಗಳಿಂದ ನಿರೋಪಿಸಬೇಕಾಗಿದ್ದು, ಇದಕ್ಕೆ ಅನುಗುಣವಾಗಿ ಭಾರತೀಯ ಸಾಕ್ಷ ಅಧಿನಿಯಮ ಕಲಂ.101 ರಿಂದ 103 ರಂತೆ ರುಜುವಾತು ಪಡಿಸುವ ಹೊಣೆಗಾರಿಕೆಯು ಅಭಿಯೋಜನೆಯ ಮೇಲೆ ಇರುತ್ತದೆ. ಇದಲ್ಲದೇ, ಆರೋಪಿತನ ವಿರುದ್ಧ ದೋಷಾರೋಪಣೆಯನ್ನು ಅಭಿಯೋಜನೆಯು ಯುಕ್ತಸಂಶಯಾತೀತವಾಗಿ ಪ್ರಕರಣದ ಕುರುಹುಗಳಿಗೆ ಒಂದಕ್ಕೊಂದು ಸಂಬಂಧಿಸುವ ವಿಷಯಗಳನ್ನು ಕ್ರೋಢಿಕರಿಸಿಕೊಂಡು ರುಜುವಾತುಪಡಿಸಬೇಕಾಗುತ್ತದೆ.

**17.** ‘ವಿ.ಡಿ. ಝಿಂಗನ್ ವಿರುದ್ಧ ಉತ್ತರ ಪ್ರದೇಶ ರಾಜ್ಯ’ "ಎ.ಐ.ಆರ್ **(1966)** ಎಸ್.ಎಸ್.ಸಿ. **1767’** ಪ್ರಕರಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ಅಪರಾಧಿಕ ನ್ಯಾಯ ಶಾಸ್ತ್ರದ ಪ್ರಕಾರ ರುಜುವಾತಿನ ಹೊಣೆಗಾರಿಕೆ ಸಂಪೂರ್ಣವಾಗಿ ಅಭಿಯೋಜನೆಯವರ ಮೇಲೆ ಇದ್ದು, ಅಭಿಯೋಜನೆಯವರು ಆರೋಪ ಮಾಡಿರುವ ಕಲಂ.ಗಳ ಎಲ್ಲ ಘಟಕಾಂಶಗಳನ್ನು ಯಾವುದೇ ಸಂಶಯಕ್ಕೆ ಎಡೆ ಮಾಡಿಕೊಡದಂತೆ ರುಜುವಾತುಪಡಿಸಬೇಕಾದ ಹೊಣೆಗಾರಿಕೆ ಹೊಂದಿರುತ್ತಾರೆ. ಒಂದು ವೇಳೆ ಹಾಜರುಪಡಿಸಿರುವ ಸಾಕ್ಷ್ಯಗಳಲ್ಲಿ ಏನಾದರೂ ಸಂಶಯ ಕಂಡು ಬಂದರೆ, ಸದರಿ ಸಂಶಯದ ಲಾಭವು ಆರೋಪ ಎದುರಿಸುತ್ತಿರುವ ಆರೋಪಿತರಿಗೆ ಸಿಗಬೇಕು ಎಂದು ಅಭಿಪ್ರಾಯಪಟ್ಟಿದೆ. ಈ ಮೇಲೆ ಹೇಳಿದ ಕಾರಣಗಳಿಂದ ಕಡತದಲ್ಲಿರುವ ಅಭಿಯೋಜನೆಯ ಮೌಖಿಕ ಮತ್ತು ದಾಖಲಾತಿ ಸಾಕ್ಷಾಧಾರಗಳನ್ನು ಒಟ್ಟಾರೆಯಾಗಿ ಪರಿಗಣಿಸಿ ಹಾಗೂ ನಿರ್ಧರಿತ ತೀರ್ಪಿಗನುಗುನವಾಗಿ, ಅಭಿಯೋಜನೆಯು ಆರೋಪಿತನು ಮರಳನ್ನು ಕಳ್ಳತನದಿಂದ ಸಾಗಾಟಮಾಡುತ್ತಿದ್ದ ಎನ್ನುವ ಬಗ್ಗೆ ರುಜುವಾತುಪಡಿಸಲು ವಿಫಲರಾಗಿದ್ದರಿಂದ

ಆರೋಪಿತನ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.379 ರಡಿಯಲ್ಲಿ ಮಾಡಿರುವ ದೋಷಾರೋಪಣೆಯ ಮೇಲೆ ಆರೋಪಿತನಿಗೆ ಶಿಕ್ಷೆ ನೀಡಲು ಸಾಕಷ್ಟು ಒಪ್ಪಬಹುದಾದಂತಹ ಸಾಕ್ಷಾಧಾರಗಳು ಇಲ್ಲದೇ ಇದ್ದುದ್ದರಿಂದ ಸಂಶಯದ ಲಾಭವನ್ನು ಆರೋಪಿತನಿಗೆ ನೀಡಿ ಅಂಶ 1 ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

**18.** <u>ಅಂಶ **2** ಮತ್ತು **3**</u>**:** ಈ ಅಂಶಗಳು ಒಂದಕ್ಕೊಂದು ಪೂರಕವಾಗಿದ್ದು, ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಈ ಅಂಶಗಳನ್ನು ಒಟ್ಟಿಗೆ ತೆಗೆದುಕೊಂಡು ಈ ಕೆಳಕಂಡಂತೆ ಕಾರಣಗಳನ್ನು ನೀಡಲಾಗಿದೆ.

ಮೋಟಾರ ವಾಹನ ಕಾಯ್ದೆ ಕಲಂ.3 ಸಹಕಲಂ.181 ರ ಪ್ರಕಾರ ವಾಹನವನ್ನು ನಡೆಸುವುದಕ್ಕಾಗಿ ಒಬ್ಬ ವ್ಯಕ್ತಿಯನ್ನು ಅಧೀಕೃತಗೊಳಿಸಿ ನೀಡಿರುವ, ಚಾಲ್ತಿಯಲ್ಲಿರುವ ಚಾಲನ ಲೈಸೆನ್ಸ್‌ನ್ನು ಹೊಂದದ ಹೊರತು, ಯಾರೇ ವ್ಯಕ್ತಿಯು ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಮೋಟಾರು ವಾಹನವನ್ನು ನಡೆಸತಕ್ಕದ್ದಲ್ಲ ಒಂದು ವೇಳೆ ನಡೆಸಿದರೇ ಮೂರು ತಿಂಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ದಂಡವನ್ನು ಅಥವಾ ಅವೆರಡನ್ನು ವಿಧಿಸಬಹುದು.

19. ಮೋಟಾರ ವಾಹನ ಕಾಯ್ದೆ ಕಲಂ.39 ಸಹಕಲಂ.192 ರ ಪ್ರಕಾರ ನೋಂದಣಿ ಗುರುತನ್ನು ಪ್ರದರ್ಶಿಸದೇ ವಾಹನವನ್ನು ಸಾರ್ವಜನಿಕ ಸ್ಥಳದಲ್ಲಿ ಚಲಾಯಿಸಿದರೇ ಮೊದಲ ಅಪರಾಧಕ್ಕೆ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ, ಆದರೆ ಎರಡು ಸಾವಿರ ರೂಪಾಯಿಗಳಿಗಿಂತ ಕಡಿಮೆಯಾಗದ ದಂಡವನ್ನು ವಿಧಿಸಬಹುದು.

**20.** ಈ ಪ್ರಸ್ತುತ ಪ್ರಕರಣದಲ್ಲಿ ದಿನಾಂಕ 18-07-2017 ರಂದು ಸಾಯಂಕಾಲ 4-45 ಗಂಟೆಗೆ ಲಕ್ಷ್ಮೇಶ್ವರ ಪೋಲಿಸ್ ಠಾಣೆ ಹದ್ದಿಯ ಪೈಕಿ ಅಕ್ಕಿಗುಂದ ಸಮೀಪದಲ್ಲಿ ಇರುವ ಹಳ್ಳದಲ್ಲಿ ಆರೋಪಿಯು ತನ್ನ ಮಾಲೀಕತ್ವದ ಸ್ವರಾಜ ಕಂಪನಿಯ ನೋಂದಣಿ ಸಂಖ್ಯೆ ಬರೆಯಿಸದೆ ಇದ್ದ

ಟ್ರ್ಯಾಕ್ಟರ್ ಇಂಜಿನ ನಂ.391357/ಎಸ್ ಯುಪಿ13526, ಚೆಸ್ಸಿ ನಂ. ಡಬ್ಲ್ಯೂವಾಯಟಿಎ28432119018 ನೇ ಟ್ರ್ಯಾಕ್ಟರಕ್ಕೆ ಜೋಡನೆ ಮಾಡಿದ ನೋಂದಣಿ ಮಾಡಿಸದೇ ಇದ್ದ ಟ್ರೈಲರ ಚಸ್ಸಿ ನಂ.39 ಇಯರ 2016ನ್ನು ತಾನು ಚಾಲನಾ ಪರವಾಣಿಗೆ ಪತ್ರವನ್ನು ಹೊಂದದೇ ಇದ್ದರೂ ಸಹ ಸರ್ಕಾರದಿಂದ ಅಥವಾ ಸಂಬಂಧಪಟ್ಟ ಇಲಾಖೆಯಿಂದ ಯಾವುದೇ ಅನುಮತಿ ಪಡೆಯದೆ ಅ.ಕಿ. ರೂ.1500/- ಕಿಮ್ಮತ್ತಿನ 2 ಘನ ಮೀಟರನಷ್ಟು ಮರಳನ್ನು ಕಳ್ಳತನದಿಂದ ಹೇರಿಕೊಂಡು ಲಕ್ಷ್ಮೇಶ್ವರ-ಗೊಜನೂರ ರಸ್ತೆ ಮೇಲೆ ಪಾರ್ವತಿ ಪೆಟ್ರೋಲ್ ಬಂಕ ಹತ್ತಿರ ಬರುತ್ತಿರುವಾಗ ಸಿಕ್ಕಿಬಿದ್ದು ಆ ಮೂಲಕ ಭಾ.ದಂ.ಸಂ. ಕಲಂ.379 ರಡಿಯಲ್ಲಿ ಹಾಗೂ ಮೋಟರ್ ವಾಹನ ಕಾಯ್ದೆ ಕಲಂ.3 ಸಹಕಲಂ.181 ಮತ್ತು ಕಲಂ.192 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಆರೋಪಿತನು ಎಸಗಿರುತ್ತಾನೆಂದು ಎಂಬುದನ್ನು ಅಭಿಯೋಜನೆಯು ಯುಕ್ತಸಂಶಯಾತೀತವಾಗಿ ರುಜುವಾತು ಪಡಿಸಬೇಕಾಗುತ್ತದೆ.

21. ಈ ನಿಟ್ಟಿನಲ್ಲಿ ಅಂಶ 1 ರಲ್ಲಿ ಆರೋಪಿತನ ವಿರುದ್ಧ ಭಾ.ದಂ.ಸಂ. ಕಲಂ 379 ರಡಿಯಲ್ಲಿ ಮಾಡಿದ ಆಪಾದನೆಯನ್ನು ಯುಕ್ತಸಂಶಯಾತೀತವಾಗಿ ರುಜುವಾತುಪಡಿಸಲು ಅಭಿಯೋಜನೆಯು ವಿಫಲವಾಗಿದ್ದು ಇರುತ್ತದೆ. ಮುಂದುವರೆದು ಅಭಿಯೋಜನೆಯು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿ ನೋಡಲಾಗಿ ಆರೋಪಿತನು ತಾನು ವಾಹನ ಚಲಾವನೆ ಮಾಡಲು ಪರವಾನಿಗೆ ಹೊಂದಿದ್ದ ಎಂಬುವುದನ್ನು ರುಜುವಾತುಪಡಿಸಲು ಯಾವುದೇ ದಾಖಲೆಗಳನ್ನು ಹಾಜರಪಡಿಸಿರುವುದಿಲ್ಲ. ಆದೇ ರೀತಿ ಅಭಿಯೋಜನೆಯ ಸಾಕ್ಷಿದಾರರನ್ನು ಪಾಟೀ ಸವಾಲು ಮಾಡಿದಾಗಲೂ ಸಹ ತಾನು ಪರವಾನಿಗೆ ಹೊಂದಿದ ಬಗ್ಗೆ ಎಲ್ಲಿಯೂ ನಮೂದಿಸಿರುವುದಿಲ್ಲ. ಆರೋಪಿತನು ತಾನು ವಾಹನ ಚಲಾವನೆ ಮಾಡಲು ಪರವಾನಿಗೆ ಇತ್ತು ಎಂದು ರುಜುವಾತುಪಡಿಸುವ ಹೊಣೆಗಾರಿಕೆಯು ಆರೋಪಿತನ ಮೇಲೆ ಇರುತ್ತದೆ. ಆದರೆ, ಪ್ರಸ್ತುತ ಪ್ರಕರಣದಲ್ಲಿ ಅಂತಹ ಯಾವುದೇ ಮೌಖಿಕ ಹಾಗೂ ದಸ್ತಾವೇಜು ಸಾಕ್ಷಿಗಳನ್ನು ಈ

ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ಕಾರಣ, ಮೋಟರ ವಾಹನ ಕಾಯ್ದೆ ಕಲಂ.3 ರ ಪ್ರಕಾರ ಸಾರ್ವಜನಿಕ ಸ್ಥಳದಲ್ಲಿ ವಾಹನವನ್ನು ಚಲಾವನೆ ಮಾಡಲು ಪರವಾನಿಗೆಯನ್ನು ಹೊಂದಿರುವುದು ಅವಶ್ಯಕವಾಗಿರುತ್ತದೆ. ಆದರೆ ಅಭಿಯೋಜನೆಯು ಆರೋಪಿತ ಚಾಲನಾ ಪರವಾನಿಗೆಯನ್ನು ಹೊಂದಿರಲಿಲ್ಲವೆಂದು ಆರೋಪಿತನ ಮೇಲೆ ಆರೋಪವನ್ನು ಮಾಡಿರುತ್ತಾರೆ. ಮೋಟರ ವಾಹನ ಕಾಯ್ದೆಯ ಕಲಂ.133 ರ ಪ್ರಕಾರ ವಾಹನದ ಮಾಲೀಕ, ಚಾಲಕ ಅಥವಾ ನಿರ್ವಾಹಕ ಆರೋಪಿತನಾಗಿದ್ದಲ್ಲಿ ಪೋಲಿಸ ಅಧಿಕಾರಿಯ ಆದೇಶದ ಮೇರೆಗೆ ತನ್ನ ಹೆಸರು, ವಿಳಾಸ ಅಥವಾ ಚಾಲನಾ ಪರವಾನಿಗೆಯ ಬಗ್ಗೆ ತಿಳಿಸುವುದು ಆತನ ಕರ್ತವ್ಯವಾಗಿರುತ್ತದೆ. ಆರೋಪಿತನ ಪರ ವಕೀಲರು ಪೋಲಿಸರು ತಮಗೆ ಕಲಂ.133 ರಡಿಯಲ್ಲಿ ಯಾವುದೇ ನೋಟಿಸನ್ನು ನೀಡಿರುವುದಿಲ್ಲವೆಂದು ಆದ್ದರಿಂದ ಅಭಿಯೋಜನೆಯು ಆರೋಪಿತನ ಮೇಲೆ ಹೊರಸಿರುವ ಈ ಅಪರಾಧವನ್ನು ರುಜುವಾತುಪಡಿಸಲು ವಿಫಲರಾಗಿರುತ್ತಾರೆ. ಆದ್ದರಿಂದ ಸಂಶಯದ ಲಾಭವನ್ನು ಆರೋಪಿತನಿಗೆ ನೀಡಲು ಪ್ರಾರ್ಥಿಸಿರುತ್ತಾರೆ. ಕಲಂ.133 ರ ಪ್ರಕಾರ ಚಾಲನಾ ಪರವಾನಿಗೆಯನ್ನು ತನಿಖಾಧಿಕಾರಿಗೆ ನೀಡುವುದು ವಾಹನ ಮಾಲೀಕ ಹಾಗೂ ಚಾಲಕನ ಆದ್ಯ ಕರ್ತವ್ಯವಾಗಿರುತ್ತದೆ. ವಾಹನದ ಮಾಲೀಕನು/ಆರೋಪಿತನು ತನ್ನ ದಾಖಲೆಗಳನ್ನು ತನಿಖಾಧಿಕಾರಿಗೆ ನೀಡದಿರುವುದು ಕಂಡಬಂದಿರುತ್ತದೆ. ಆರೋಪಿತನು ತನ್ನ ವಾಹನದ ಚಾಲನಾ ಪರವಾನಿಗೆಯನ್ನು ತನಿಖಾಧಿಕಾರಿ ಮುಂದೆ ಹಾಜರಪಡಿಸಿರುವುದಿಲ್ಲ. ಆದ್ದರಿಂದ ತಾನು ಚಾಲನಾ ಪರವಾನಿಗೆಯನ್ನು ಹೊಂದಿದ್ದೇನೆಂದು ರುಜುವಾತುಪಡಿಸುವ ಹೊಣೆಗಾರಿಕೆ ಆರೋಪಿತನ ಮೇಲೆ ಇರುತ್ತದೆ. ಏಕೆಂದರೆ ಆರೋಪಿತನೇ ಸವಾರನಾಗಿದ್ದು, ತಾನು ಪರವಾನಿಗೆ ಹೊಂದಿರುವ ಬಗ್ಗೆ ಅವನೇ ರುಜುವಾತುಪಡಿಸತಕ್ಕದ್ದು.

22. ಸದರಿ ಮೋಟರ ವಾಹನ ಕಾಯ್ದೆಗೆ ವಿರೋಧವಾಗಿ ಅಂದರೆ ವಾಹನ ನೋಂದಣಿ ಮಾಡಿಸದ ಬಗ್ಗೆ ದಾಖಲೆಗಳನ್ನು ಹೊಂದದೇ ಆರೋಪಿತನು ವಾಹನವನ್ನು ಪೋಲಿಸರು

ಜಪ್ತಿಪಡಿಸಿದಾಗ ತನಿಖಾಧಿಕಾರಿಯ ಮುಂದೆ ವಾಹನ ಬಿಡುಗಡೆ ಮಾಡಿಕೊಳ್ಳಲು ದಾಖಲೆಗಳನ್ನು ಸಲ್ಲಿಸಿದ್ದು, ಸದರಿ ದಾಖಲೆಗಳನ್ನು ಪರಿಶೀಲಿಸಲಾಗಿ ಸದರಿ ವಾಹನಕ್ಕೆ ನೋಂದಣಿ ಮಾಡಿಸಿದ ದಾಖಲೆಗಳನ್ನು ಮಾಡಿಸಿರುವುದು ಎಲ್ಲಿಯೂ ಕಂಡುಬರುವುದಿಲ್ಲ. ಕಾರಣ, ಈ ಅಂಶಗಳಿಗೆ ಹೆಚ್ಚಿನ ವಿವರಣೆಯನ್ನು ನೀಡುವ ಅವಶ್ಯಕತೆ ಇರದೇ ಇದ್ದ ಕಾರಣ, ಆರೋಪಿತನು ವಾಹನದ ಮಾಲೀಕರಿದ್ದು, ಸದರಿ ವಾಹನಕ್ಕೆ ಮೋಟರ ವಾಹನ ಕಾಯ್ದೆಯಂತೆ ನೋಂದಣಿ ಮಾಡಿಸಿದ ದಾಖಲೆಗಳನ್ನು ಮಾಡಿಸದೇ ಸಾರ್ವಜನಿಕ ಸ್ಥಳದಲ್ಲಿ ಚಲಾವನೆ ಮಾಡಿ ಮೋಟರ್ ವಾಹನ ಕಾಯ್ದೆಯಡಿ ದಂಡಿಸಲ್ಪಡುತ್ತಾರೆ.

23. ಕಾರಣ, ಕಡತದಲ್ಲಿರುವ ದಾಖಲಾತಿಗಳನ್ನು ಪರಿಗಣನೆಗೆ ತೆಗೆದುಕೊಂಡು, ಈ ಮೇಲ್ಕಂಡ ದಾಖಲೆಗಳಿಂದ ಹಾಗೂ ಸಾಕ್ಷಿಗಳನ್ನು ಪರಿಗಣಿಸಿ ಆರೋಪಿತನ ವಿರುದ್ಧ ಮಾಡಿರುವ ಆಪಾದನೆಯನ್ನು ರುಜುವಾತುಪಡಿಸುವಲ್ಲಿ ಅಭಿಯೋಜನೆಯು ಸಫಲರಾಗಿದ್ದು ಕಾರಣ ಅಂಶ 2 ಮತ್ತು 3 ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

**24.** <u>ಅಂಶ **4:**</u> ಈ ಮೇಲೆ ಚರ್ಚಿಸಿದ ಅಂಶ 1 ರಿಂದ 3 ರ ಅಂಶಗಳ ಆಧಾರದ ಮೇಲೆ ಈ ಕೆಳಕಂಡಂತೆ ಆದೇಶಿಸಲಾಗಿದೆ-

## <u>:ಆದೇಶ:</u>

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿತನನ್ನು ಭಾರತೀಯ ದಂಡ ಸಂಹಿತೆ ಕಲಂ.379 ರಡಿಯಲ್ಲಿನ ಅಪರಾಧದಿಂದ ದೋಷಮುಕ್ತಗೊಳಿಸಲಾಗಿದೆ.

ಮೋಟರ್ ವಾಹನ ಕಾಯ್ದೆ ಕಲಂ.3 ಸಹಕಲಂ.181 ಮತ್ತು ಕಲಂ.192 ರಡಿಯಲ್ಲಿ ದೋಷಿಯೆಂದು ತೀರ್ಮಾನಿಸಲಾಗಿದೆ.

ಶಿಕ್ಷೆಯ ಆದೇಶಕ್ಕೆ ಕಾಯ್ದಿರಿಸಲಾಗಿದೆ.

(ಶೀಘ್ರಲಿಪಿಗಾರರು ನನ್ನ ಉಕ್ತಲೇಖನವನ್ನು ನೇರವಾಗಿ ಗಣಕೀಕರಿಸಿದ್ದು ಸೂಕ್ತ ತಿದ್ದುಪಡಿಗಳನ್ನು ಮಾಡಿದ ನಂತರ ತೆರೆದ ನ್ಯಾಯಾಲಯದಲ್ಲಿ ಇಂದು ದಿಃ **03** ನೇ ಜೂನ್ **2026** ರಂದು ತೀರ್ಪನ್ನು ಘೋಷಿಸಲಾಯಿತು )

SATISHA M. Digitally signed by SATISHA M. Date: 2026.06.04 15:36:01 +0530

**(ಶ್ರೀ ಸತೀಶ ಎಂ.)**
ದಿ.ನ್ಯಾ. ಮತ್ತು ಪ್ರ. ದ. ನ್ಯಾ. ದಂ. ನ್ಯಾ.ಲಕ್ಷ್ಮೇಶ್ವರ

**:ಅನುಬಂಧ:**

**1.** ಅಭಿಯೋಜನೆಯವರ ಪರ ಸಾಕ್ಷಿದಾರರ ಪಟ್ಟಿ-

| | | |
|---|---|---|
| ಪ್ರಾ.ಸಾ.1 | : | ಶ್ರೀ ಸೋಮಣ್ಣ ತಂದೆ ಕರಿಯಲ್ಲಪ್ಪ ಬನ್ನಿ |
| ಪ್ರಾ.ಸಾ.2 | : | ಶ್ರೀ ಶಿವಾನಂದ ತಂದೆ ದೇವೀಂದ್ರಪ್ಪ ಕಟಗಿ |
| ಪ್ರಾ.ಸಾ.3 | : | ಶ್ರೀ ಮಂಜುನಾಥ ತಂದೆ ಶೇಖರಗೌಡ ಪಾಟೀಲ |
| ಪ್ರಾ.ಸಾ.4 | : | ಶ್ರೀ ವಿನಾಯಕ ತಂದೆ ಬಸವಣ್ಣೆಪ್ಪ ಮುದಗಲ್ |
| ಪ್ರಾ.ಸಾ.5 | : | ಶ್ರೀ ಎಲ್.ಡಿ. ಭದ್ರಾಪೂರ |

**2.** ಅಭಿಯೋಜನೆಯವರ ಪರ ದಾಖಲೆಗಳ ಪಟ್ಟಿ-

| | | |
|---|---|---|
| ನಿ.ಪಿ.1 | : | ಗುನ್ನಾ ಜಾಗೆಯ ಪಂಚನಾಮೆ |
| ನಿ.ಪಿ.1(ಎ,ಬಿ) | : | ಪ್ರಾ.ಸಾ. ರವರ ಸಹಿಗಳು |
| ನಿ.ಪಿ.2 | : | ಆರೋಪಿತನು ಅಕ್ರಮವಾಗಿ ಕಳ್ಳತನದಿಂದ ಮರಳನ್ನು ತುಂಬಿದ ಜಾಗೆಯ ಪಂಚನಾಮೆ |
| ನಿ.ಪಿ.2(ಎ, ಬಿ) | : | ಪ್ರಾ.ಸಾ. ರವರ ಸಹಿಗಳು |
| ನಿ.ಪಿ.3 | : | ಛಾಯಾಚಿತ್ರ |

**3:** ಅಭಿಯೋಜನೆಯವರ ಪರ ಮುದ್ದೆಮಾಲುಗಳ ಪಟ್ಟಿ - ಇಲ್ಲ

**4:** ಆರೋಪಿತನ/ರ ಪರ ವಿಚಾರಣೆ ಮಾಡಿದ ಸಾಕ್ಷಿದಾರರು - ಇಲ್ಲ

**5:** ಆರೋಪಿತನ/ರ ಪರ ದಾಖಲೆಗಳ ಪಟ್ಟಿ - ಇಲ್ಲ

SATISHA M. Digitally signed by SATISHA M. Date: 2026.06.04 15:36:12 +0530

ದಿ.ನ್ಯಾ. ಮತ್ತು ಪ್ರ. ದ. ನ್ಯಾ. ದಂ. ನ್ಯಾ.ಲಕ್ಷ್ಮೇಶ್ವರ

## <u>ಶಿಕ್ಷೆಯ ಮೇಲೆ ಆದೇಶ</u>

ಈ ಮೇಲಿನ ತೀರ್ಪಿನಂತೆ ಆರೋಪಿತನನ್ನು ಮೋಟಾರ್ ವಾಹನ ಕಾಯ್ದೆ ಕಲಂ.3 ಸಹಕಲಂ.181 ಮತ್ತು ಕಲಂ.192 ರಡಿಯಲ್ಲಿ ದೋಷಿಯೆಂದು ತೀರ್ಮಾನಿಸಲಾಗಿದ್ದು, ಮಾನ್ಯ ಸರ್ಕಾರಿ ಅಭಿಯೋಜಕರು ಆರೋಪಿತನ ಮೇಲೆ ಹೊರೆಸಿರುವ ಭಾರತೀಯ ದಂಡ ಸಂಹಿತೆ ಕಲಂ.379 ರಡಿಯ ಅಪರಾಧದಿಂದ ಸಾಕ್ಷಾಧಾರಗಳ ಕೊರತೆಯಿಂದ ದೋಷಮುಕ್ತನಾಗಿರುತ್ತಾನೆ.

ಆದರೆ ಒಬ್ಬ ಪ್ರಜ್ಞಾವಂತ ಪ್ರಜೆಯಾಗಿ ವಾಹನ ಚಲಾವನೆ ಮಾಡಲು ಪರವಾನಿಗೆ ಹೊಂದುವುದು, ನೋಂದಣಿ ಮಾಡಿಸಿದ ದಾಖಲೆ ಮಾಡಿಸುವುದು ಕಡ್ಡಾಯವಾಗಿರುತ್ತದೆ. ಒಬ್ಬ ಪ್ರಜ್ಞಾವಂತ ಪ್ರಜೆಯಾಗಿ ಕಡ್ಡಾಯವಾಗಿ ಕೈಗೊಳ್ಳಬೇಕಾದ ಕರ್ತವ್ಯವಾಗಿರುತ್ತದೆ.

ಆರೋಪಿತನ ಪರ ವಕೀಲರು, ಆರೋಪಿತನು ಮುಗ್ಧನಾಗಿರುತ್ತಾನೆ ಮತ್ತು ರೈತನಾಗಿರುತ್ತಾನೆ, ಅವರಿಗೆ ಕಾನೂನಿನ ಸರಿಯಾದ ಜ್ಞಾನವಿಲ್ಲದೇ ಇರುವುದರಿಂದ ಆರೋಪಿತನು ವಾಹನ ಚಲಾವನೆ ಮಾಡಲು ಪರವಾನಿಗೆಯನ್ನು ಮಾಡಿಸಿರುವುದಿಲ್ಲ, ನೋಂದಣಿಯನ್ನು ಮಾಡಿಸಿರುವುದಿಲ್ಲ. ಆದರೆ, ಆತ ಭಾರತೀಯ ದಂಡ ಸಂಹಿತೆ ಕಲಂ.379 ರಡಿಯ ಅಪರಾಧದಿಂದ ದೋಷಮುಕ್ತಗೊಂಡಿರುತ್ತಾನೆ. ಆರೋಪಿತನು ಬಡವನಾಗಿದ್ದು ತನ್ನ ಉಪಜೀವನವನ್ನು ಕೂಲಿ ಮಾಡಿ ಸಾಗಿಸುತ್ತಿದ್ದು, ಆರೋಪಿತನಿಗೆ ಜೈಲು ಶಿಕ್ಷೆ ವಿಧಿಸಿದರೇ ಅವರ ಕುಟುಂಬವು ಬೀದಿಗೆ ಬಿಳುತ್ತದೆ. ಕಾರಣ ಆರೋಪಿತನಿಗೆ ದಂಡವನ್ನು ವಿಧಿಸಿ, ಶರತ್ತಿಗೆ ಒಳಪಡಿಸಿ ಬಿಡುಗಡೆಗೊಳಿಸಬೇಕಾಗಿ ಪ್ರಾರ್ಥಿಸಿರುತ್ತಾರೆ.

ಅಭಿಯೋಜನೆ ಹಾಗೂ ಆರೋಪಿತನ ಪರ ವಕೀಲರ ವಾದ, ವಿವಾದಗಳನ್ನು ಆಲಿಸಿದ ನಂತರ ಈ ನ್ಯಾಯಾಲಯದ ಅನಿಸಿಕೆ ಏನೆಂದರೆ ಯಾವುದೇ ಒಬ್ಬ ವ್ಯಕ್ತಿಯು ಒಂದು ವಾಹನವನ್ನು ಚಲಾವನೆ ಮಾಡಲು ಪರವಾನಿಗೆ ಹೊಂದುವುದು ಅವಶ್ಯಕವಾಗಿರುತ್ತದೆ ಮತ್ತು

ವಾಹನದ ಮಾಲೀಕನಾದವನು ಕಡ್ಡಾಯವಾಗಿ ವಾಹನವನ್ನು ನೋಂದಣಿ ಮಾಡಿಸುವುದು, ದಾಖಲೆಗಳನ್ನು ಹೊಂದುವುದು ಅವಶ್ಯಕವಾಗಿರುತ್ತದೆ. ಸದರಿ ಪ್ರಕರಣದಲ್ಲಿ ಆರೋಪಿತನು ಪರವಾನಿಗೆ ಹೊಂದದೇ ಇದ್ದರೂ, ನೋಂದಣಿ ಮಾಡಿಸದೇ ವಾಹನವನ್ನು ಸಾರ್ವಜನಿಕ ರಸ್ತೆಯಲ್ಲಿ ಚಲಾವನೆ ಮಾಡಿರುವುದು ಸಾಕ್ಷಾಧಾರಗಳಿಂದ ದೃಢಪಟ್ಟಿದ್ದು, ಇದರಿಂದ ಆರೋಪಿತನ ನಿರ್ಲಕ್ಷ ಮತ್ತು ಬೇಜವಾಬ್ದಾರಿತನ ಎದ್ದು ಕಾಣುತ್ತದೆ.

ಮೋಟಾರ ವಾಹನ ಕಾಯ್ದೆ ಕಲಂ.3 ಸಹಕಲಂ.181 ರ ಪ್ರಕಾರ ಮೂರು ತಿಂಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಐದು ನೂರು ರೂಪಾಯಿಗಳವರೆಗೆ ದಂಡವನ್ನು ಅಥವಾ ಅವೆರಡನ್ನು ವಿಧಿಸಬಹುದು.

ಮೋಟಾರ ವಾಹನ ಕಾಯ್ದೆ ಕಲಂ.39 ಸಹಕಲಂ.192 ರ ಪ್ರಕಾರ ನೋಂದಣಿ ಗುರುತನ್ನು ಪ್ರದರ್ಶಿಸದೇ ವಾಹನವನ್ನು ಸಾರ್ವಜನಿಕ ಸ್ಥಳದಲ್ಲಿ ಚಲಾಯಿಸಿದರೇ ಮೊದಲ ಬಾರಿಯ ಅಪರಾಧಕ್ಕೆ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ, ಆದರೆ ಎರಡು ಸಾವಿರ ರೂಪಾಯಿಗಳಿಗಿಂತ ಕಡಿಮೆಯಾಗದ ದಂಡವನ್ನು ವಿಧಿಸಬಹುದು.

ಪ್ರಸ್ತುತ ಪ್ರಕರಣದಲ್ಲಿ ಆರೋಪಿತನು ಪರವಾನಿಗೆ ಹೊಂದದೇ ಇದ್ದರೂ, ನೋಂದಣಿ ಮಾಡಿಸದೇ ವಾಹನವನ್ನು ಚಲಾವಣೆಮಾಡಿರುವುದು ಸಾಕ್ಷಾಧಾರಗಳಿಂದ ಆರೋಪಿತನು ಸದರಿ ಆಪಾದನೆಗಳನ್ನು ಮಾಡಿರುವುದಾಗಿ ಕಂಡುಬರುತ್ತದೆ. ಚಾಲನಾ ಪರವಾನಿಗೆ ಇಲ್ಲದೆ ವಾಹನ ಚಲಾಯಿಸಿರುವುದು, ನೋಂದಣಿ ಮಾಡಿಸದೇ ಸಾರ್ವಜನಿಕ ರಸ್ತೆಯಲ್ಲಿ ಚಲಾಯಿಸಿರುವುದು ಇವು ಗಂಭೀರವಾದ ತಪ್ಪುಗಳಾಗಿದ್ದು, ಸಾರ್ವಜನಿಕರ ಜೀವ, ಆಸ್ತಿ ಮತ್ತು ಸುರಕ್ಷತೆಯನ್ನು ಅಪಾಯಕ್ಕೆ ಒಳಪಡಿಸುವಂತದ್ದು. ಒಬ್ಬ ಪ್ರಜ್ಞಾವಂತ ಪ್ರಜೆಯಾಗಿ ಪ್ರತಿಯೊಬ್ಬರೂ ಕಾನೂನು ಪಾಲಿಸುವುದು ಕರ್ತವ್ಯ. ಆರೋಪಿತನು ತನ್ನ ಕಾನೂನುಬದ್ಧ ಕರ್ತವ್ಯಗಳನ್ನು ನಿರ್ಲಕ್ಷಿಸಿರುವುದು ಸ್ಪಷ್ಟವಾಗಿದೆ. ಆರೋಪಿತನು ಬಡ ರೈತನಾಗಿದ್ದು, ಕೂಲಿ ಮಾಡಿ ಜೀವನ ಸಾಗಿಸುತ್ತಿರುವುದರಿಂದ

ಜೈಲು ಶಿಕ್ಷೆ ವಿಧಿಸಿದರೆ ಅವರ ಕುಟುಂಬವು ಸಂಕಷ್ಟಕ್ಕೀಡಾಗುವುದು. ಆರೋಪಿತನು ಮೊದಲಬಾರಿಗೆ ತಪ್ಪಿತಸ್ಥನಾಗಿದ್ದು, ಕಾನೂನಿನ ಅರಿವು ಕೊರತೆಯಿಂದ ತಪ್ಪು ಮಾಡಿದ್ದಾನೆಂದು ಪರಿಗಣನೆಗೆ ತೆಗೆದುಕೊಂಡು, ಸಾರ್ವಜನಿಕ ಹಿತಾಸಕ್ತಿ ಹಾಗೂ ಆರೋಪಿತನ ವೈಯಕ್ತಿಕ ಪರಿಸ್ಥಿತಿಗಳನ್ನು ಗಣನೆಗೆ ತೆಗೆದುಕೊಂಡು, ಈ ಪ್ರಕರಣದಲ್ಲಿ ಜೈಲು ಶಿಕ್ಷೆ ವಿಧಿಸುವ ಬದಲು ಜುಲ್ಮಾನೇ ವಿಧಿಸುವುದು ಸಮಂಜಸ ಎಂದು ನ್ಯಾಯಾಲಯವು ಅಭಿಪ್ರಾಯಕ್ಕೆ ಬಂದಿದೆ. ಇದರಿಂದ ಕಾನೂನು ಪಾಲನೆಯ ಅಗತ್ಯತೆಯನ್ನು ಒತ್ತಿ ಹೇಳುವಂತಾಗುತ್ತದೆ ಮತ್ತು ಆರೋಪಿತನ ಕುಟುಂಬಕ್ಕೂ ಅತಿಯಾದ ತೊಂದರೆ ಉಂಟಾಗುವುದಿಲ್ಲ. ಪ್ರಕರಣದ ವಸ್ತುಸ್ಥಿತಿ ಹಾಗೂ ಸಾಕ್ಷಾಧಾರಗಳನ್ನು ಪರಿಗಣಿಸಿ ಜುಲ್ಮಾನೆ ವಿಧಿಸುವುದು ಸೂಕ್ತವಾಗಿದ್ದು, ಪ್ರಕರಣದ ವಸ್ತುಸ್ಥಿತಿ ಹಾಗೂ ಸಾಕ್ಷಾಧಾರಗಳನ್ನು ಪರಿಗಣಿಸಿ ಈ ನ್ಯಾಯಾಲಯವು ಆರೋಪಿತನಿಗೆ ಕಾರಾಗೃಹ ಶಿಕ್ಷೆ ವಿಧಿಸುವ ಬದಲು ಕಾಯ್ದೆಯಡಿ ಜುಲ್ಮಾನೆ ವಿಧಿಸಲು ಈ ನ್ಯಾಯಾಲಯವು ಅಭಿಪ್ರಾಯಕ್ಕೆ ಬಂದಿದ್ದು ಈ ಕೆಳಕಂಡಂತೆ -

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(2) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿತಯು ಮೋಟರ್ ವಾಹನ ಕಾಯ್ದೆ ಕಲಂ.3 ಸಹಕಲಂ.181 ಕ್ಕೆ ಸಂಬಂಧಿಸಿದಂತೆ ರೂ.1000/- ವರೆಗಿನ ದಂಡವನ್ನು ನ್ಯಾಯಾಲಯಕ್ಕೆ ಭರಿಸತಕ್ಕದ್ದು, ಒಂದು ವೇಳೆ ದಂಡವನ್ನು ಭರಿಸಿದೇ ಇದ್ದಲ್ಲಿ 10 ದಿನಗಳವರೆಗಿನ ಸಾದಾ ಕಾರಾವಾಸ ಶಿಕ್ಷೆಗೆ ಒಳಪಡತಕ್ಕದ್ದು.

ಮೋಟರ್ ವಾಹನ ಕಾಯ್ದೆ ಕಲಂ.39 ಸಹಕಲಂ.192 ಕ್ಕೆ ಸಂಬಂಧಿಸಿದಂತೆ ರೂ.2,000/- ವರೆಗಿನ ದಂಡವನ್ನು ನ್ಯಾಯಾಲಯಕ್ಕೆ ಭರಿಸತಕ್ಕದ್ದು, ಒಂದು ವೇಳೆ ದಂಡವನ್ನು ಭರಿಸಿದೇ ಇದ್ದಲ್ಲಿ 30 ದಿನಗಳವರೆಗಿನ ಸಾದಾ ಕಾರಾವಾಸ ಶಿಕ್ಷೆಗೆ ಒಳಪಡತಕ್ಕದ್ದು.

ಆರೋಪಿತನು ಕಲಂ.437(ಎ) ರಡಿಯಲ್ಲಿ ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆ ಪತ್ರಗಳನ್ನು ಹೊರತುಪಡಿಸಿ, ಉಳಿದಂತೆ ಆರೋಪಿತನ ಹಾಗೂ ಅವನ ಪರ ಜಾಮೀನುದಾರರು ಈ ಮೊದಲು ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆ ಪತ್ರಗಳನ್ನು ರದ್ದುಪಡಿಸಲಾಗಿದೆ.

ಆರೋಪಿತನು ಕಲಂ.437(ಎ) ರಡಿಯಲ್ಲಿ ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆ ಪತ್ರಗಳು ಮೇಲ್ಮನವಿ ಅವಧಿ ಮುಗಿಯುವವರೆಗೆ ಜಾರಿಯಲ್ಲಿರತಕ್ಕದ್ದು.

ಆರೋಪಿತನ ಮತ್ತು ಅವನ ಜಾಮೀನುದಾರರ ಜಾಮೀನು ಮುಚ್ಚಳಿಕೆಗಳು ದಂಡ ಪ್ರಕ್ರಿಯಾ ಸಂಹಿತೆ ಕಲಂ 437 (ಎ) ರೀತ್ಯ 6 ತಿಂಗಳುಗಳ ನಂತರ ರದ್ದು ಪಡಿಸಲು ಆದೇಶಿಸಲಾಗಿದೆ.

ಈ ಪ್ರಕರಣದಲ್ಲಿ ಜಪ್ತಿ ಪಡಿಸಿಕೊಂಡು, ದಿ:24-08-2017 ರಂದು ಈ ನ್ಯಾಯಾಲಯದ ಆದೇಶದಂತೆ ಅರ್ಜಿದಾರನ ಮಧ್ಯಂತರ ಸುಪರ್ದಿಗೆ ನೀಡಲಾದ ಟ್ರ್ಯಾಕ್ಟರ್ ಮತ್ತು ಟ್ರೇಲರ ಆದೇಶವನ್ನು ಖಾಯಂಗೊಳಿಸಲಾಗಿದೆ.

(ಶೀಘ್ರಲಿಪಿಗಾರರು ನನ್ನ ಉಕ್ತಲೇಖನವನ್ನು ನೇರವಾಗಿ ಗಣಕೀಕರಿಸಿದ್ದು ಸೂಕ್ತ ತಿದ್ದುಪಡಿಗಳನ್ನು ಮಾಡಿದ ನಂತರ ತೆರೆದ ನ್ಯಾಯಾಲಯದಲ್ಲಿ ಇಂದು ದಿಃ **03** ನೇ ಜೂನ್ **2026** ರಂದು ತೀರ್ಪನ್ನು ಘೋಷಿಸಲಾಯಿತು )

SATISHA M. Digitally signed by SATISHA M. Date: 2026.06.04 15:36:18 +0530

**(ಶ್ರೀ ಸತೀಶ ಎಂ.)**
**ದಿ.ನ್ಯಾ. ಮತ್ತು ಪ್ರ. ದ. ನ್ಯಾ. ದಂ. ನ್ಯಾ.ಲಕ್ಷ್ಮೇಶ್ವರ.**